**ಮನಸ್ಸಿನ ತುಂಬೆಲ್ಲಾ ಶಿವರಾಮು ಆವರಿಸಿ ಬಿಟ್ಟಿದ್ದ. ಧ್ಯಾನದಲ್ಲೂ ಕೂಡಾ. ಯಾಕೋ, ಏನೋ ಒಂದು ರೀತಿಯ ಕಳವಳ. ಶಿವರಾಮುವಿಗೆ ಏನಾಗಿಬಿಡುತ್ತೋ ಎನ್ನುವ ಆತಂಕ. ಮನಸ್ಸು ಬೇರೆಡೆ ನೆಡಲು ತೀರ್ಮಾನಿಸಿ ಟಿವಿ ಹಾಕಿದ. ಅಲ್ಲಿ ಕೊರೊನಾ ಸಂಬಂಧಿತ ಫೋನ್ ಇನ್ ಕಾರ್ಯಕ್ರಮ. ಫೋನ್ ಮಾಡಿ ತಮ್ಮ ಕಷ್ಟ ಹೇಳಿಕೊಳ್ಳುತ್ತಿದ್ದ ಜನ. ಶಿವರಾಮು ತನ್ನ ಪ್ರಿಸ್ಕ್ರಿಪ್ಷನ್ ಕಳೆದು ಹೋಗಿದೆ ಅಂತ ಫೋನ್ ಮಾಡ್ತಾನೆನೋ ಅನ್ನಿಸ್ತು. ಕಾದ. ಕಾದ. ಕಾದ. ಶಿವರಾಮು ಫೋನ್ ಮಾಡಲೇ ಇಲ್ಲ.**

ನಿತ್ಯ ಇದೆ ಆಗಿಹೋಗಿದೆ. ವೀಕೆಂಡ್‌ನಲ್ಲಿ ಮಾತ್ರ ವಿಡಿಯೊ ಕಾಲ್ ಮಾಡಿ ವಿಚಾರಿಸುತ್ತಿದ್ದ ಮಗಳು ಈಗ ಸಿಸಿಟಿವಿಯಂತೆ ಆಗಿಬಿಟ್ಟಿದ್ದಾಳೆ. ಗೊತ್ತು ಮಾಡಿಕೊಂಡಿದ್ದ ಅಡಿಗೆಯವನು ಬರ್ತಾ ಇಲ್ಲ. ಪಾಪ ಅವನಿಗೆ ಬರೋಕ್ಕೆ ಆಗಲ್ಲ. ಮತ್ತದೇ ಕಾರಣ, ಲಾಕ್‌ಡೌನ್. ಹಾಗಾಗಿ ಎರಡು ಕ್ರಾಸ್ ಹಿಂದಿರುವ ಅನನ್ಯ ದಿನಾ ತಿಂಡಿ ಊಟ ತಂದುಕೊಡ್ತಾಳೆ. ಅನನ್ಯ ಸಿರಿಯ ಬಾಲ್ಯದ ಗೆಳತಿ. ರಂಗನಿಗೂ ಮಗಳಂತೆಯೇ. ಹಾಗೆ ನೋಡಿದ್ರೆ ಸಿರಿ ಅಮೆರಿಕಕ್ಕೆ ಹೋದ ತಕ್ಷಣದಲ್ಲೇ 'ಊಟ ತಿಂಡಿ ನಮ್ಮ ಮನೆಯಿಂದಲೇ ತಂದು ಕೊಡ್ತೀನಿ ಅಂಕಲ್' ಅಂತ ಹೇಳಿದ್ದಳು ಪಾಪ. ಅವಳ ಕಕ್ಕುಲತೆಯ ಎದಿರು ಇವನ ಸ್ವಾಭಿಮಾನವೇ ಗೆದ್ದಿತ್ತು. ಯಾರೋ ಒಬ್ಬ ಅಡುಗೆಯವನನ್ನು ಅವಳೇ ಗುರ್ತುಮಾಡಿಕೊಟ್ಟಿದ್ದಳು.

ಈಗ..? ವಿಧಿ ಇಲ್ಲ... ಹೀಗೆ ಯೋಚನೆಯ ಸುಳಿಯಲ್ಲಿ ಮುಳುಗಿದವನನ್ನು 'ಹಲೋ ಅಪ್ಪಾ..' ಎಂದ ಮಗಳ ದನಿ ಮತ್ತೆ ಆನ್‌ಲೈನ್‌ಗೆ ಕರೆತಂದಿತ್ತು.

'ಏನಾಯ್ತು? ವೈಫೈ ಸ್ಲೋ ನಾ..? ಎಂದು ಹೇಳಿದವಳ ಕಣ್ಣಿಗೆ ರಂಗನ ಕೈಲಿದ್ದ ಚೀಟಿ ಕಾಣಿಸಿತು... ಆದೇನೂ ಪ್ರಿಸ್ಕ್ರಿಪ್ಷನ್? ಅಂ?..ಮಾತ್ರೆ ಮುಗಿದು ಹೋಯ್ತಾ? ತಂದುಕೊಳ್ಳಲಿಲ್ವಾ? ಸರಿ ಅದಕ್ಕೋಸ್ಕರ ಆಚೆ ಹೋಗಬೇಡ ಅನು ಬರ್ತಾಳಲ್ಲ ಅವಳಿಗೆ ಕೊಡು. ಅವಳೇ ತಂದುಕೊಡ್ತಾಳೆ...'

'ಅಯ್ಯೋ, ಇದು ನನ್ನದಲ್ಲಮ್ಮಾ...' ಎಂದು ಶುರು ಮಾಡಿ, ಶಿವರಾಮುವಿನ ಪ್ರಿಸ್ಕ್ರಿಪ್ಷನ್ ತನ್ನ ಕೈಗೆ ಬಂದ ಬಗೆಯನ್ನು ವಿವರಿಸಿದ.

'ಅದಕ್ಕೆ ನೀನು ತಲೆ ಕೆಡಿಸಿಕೊಳ್ಳಬೇಡ.. ದ್ಯಾಟ್ ಈಸ್ ಹಿಸ್ ರೆಸ್ಪಾನ್ಸಿಬಿಲಿಟಿ ಆರ್ ಇರೆಸ್ಪಾನ್ಸಿಬಿಲಿಟಿ.. ನೀನು ಅವನನ್ನ ಹುಡುಕಿಕೊಂಡು ಬೀದಿ ಬೀದಿ ಸುತ್ತೋಕೆ ಹೋಗಕೂಡದು...' ತಾಕೀತು ಮಾಡಿದಳು.

'ಶಿವರಾಮು ತನಗಿಂತ 10 ವರ್ಷ ಹಿರಿಯ. ಮುದುಕ. ಎಲ್ಲರ ಹಾಗೆ ಲಾಕ್‌ಡೌನ್‌ನಲ್ಲಿ ಇರಬೇಕಾದೋನು. ಅಲ್ಲದೆ ಅವನ ಜೊತೆಗೆ ಯಾರಾದ್ರೂ ಇದ್ದಾರೋ ಅಥವಾ ಅವನೂ ನನ್ನ ಹಾಗೆ ಒಬ್ಬಂಟಿನೋ? ಪ್ರಿಸ್ಕ್ರಿಪ್ಷನ್ ನೋಡಿದ್ರೆ ನಿನ್ನೆಗೇ ಡೋಸೇಜ್ ಮುಗಿದು ಹೋಗಿದೆ. ಈಗ ಈ ಚೀಟಿ ಕಳೆದುಕೊಂಡು ಎಷ್ಟು ಒದ್ದಾಡ್ತಾ ಇದ್ದಾನೋ? ಇದು ಯಾವ ಕಾಯಿಲೇನೋ? ...ಹ್ಯಾಗಮ್ಮ ಸುಮ್ಮನಿರೋದು'.

ಅಪ್ಪನ ಮಾತಿನಲ್ಲಿನ ಮರುಕವನ್ನು ಸಿರಿ ಗುರುತಿಸಿದಳು. ಅದರಲ್ಲೂ ವಿಶೇಷವಾಗಿ 'ಅವನೂ ನನ್ನ ಹಾಗೆ ಒಬ್ಬಂಟಿಯೋ? ಎಂದ ಮಾತು. ಅಪ್ಪನಿಗೆ ಒಬ್ಬಂಟಿತನ ಕಾಡ್ತಾ ಇದ್ಯಾ? ಮೊದಲ ಸಲ ಈ ಪ್ರಶ್ನೆ ಕೇಳಿಕೊಂಡಿದ್ದಳು. ಈ ಶಿವರಾಮುವಿನಲ್ಲಿ ಅಪ್ಪ ತನ್ನ ಭವಿಷ್ಯವನ್ನು ಕಾಣ್ತಾ ಇದ್ದಾನಾ? ಎಂದು ಕೊಂಚ ಅಧೀರಳಾದಳು. ದ್ಯಾಟ್ ಈಸ್ ಹಿಸ್ ರೆಸ್ಪಾನ್ಸಿಬಿಲಿಟಿ ಆರ್ ಇರೆಸ್ಪಾನ್ಸಿಬಿಲಿಟಿ ಅಂತ ತಾನು ಹೇಳಿದ್ದನ್ನು ಅಪ್ಪ ತನಗೇ ಅಪ್ಲೈ ಮಾಡಿಕೊಂಡನಾ? ತಲೆಯಲ್ಲಿ ಯೋಚನೆಗಳ ಸುಳಿ ಸುಳಿಯಿತು. ಸದ್ಯಕ್ಕೆ ಪರಿಸ್ಥಿತಿಯನ್ನು ನಿಭಾಯಿಸಬೇಕು. ಆಮೇಲೆ ಉಪಾಯ ಮಾಡಿ ಅವನನ್ನು ಇಲ್ಲಿಗೆ ಕರೆಸಿಕೊಳ್ಳಬೇಕು ಎಂದುಕೊಂಡಳು.

'ಸರಿ. ಆದರೆ ಅದಕ್ಕೆಂತಾ ನೀನು ಅವನನ್ನ ಹುಡುಕಿಕೊಂಡು ಓಡಾಡೋಕೆ ಆಗುತ್ತಾ? ಇಲ್ಲಾ ತಾನೇ?' ಎಂದಳು. 'ನೋಡು ಈಗ ಆ ಪ್ರಿಸ್ಕ್ರಿಪ್ಷನ್‌ನ ಫೋಟೊ ತೆಗೆದು ನನಗೆ ವಾಟ್ಸ್‌ಆ್ಯಪ್ ಮಾಡು. ನಾನು ಆ ಶಿವರಾಮುನ ಗೂಗಲ್ ನಲ್ಲಿ ಹುಡುಕ್ತೀನಿ.

### ಸುಖಿ

ನಿನ್ನೆಯ ತಪ್ಪುಗಳಿಂದ
ಪಾಠ ಕಲಿತು,
ನಾಳಿನ ದಿನಗಳಲಿ
ಭರವಸೆಯನಿಟ್ಟು,
ಇಂದಿನ ಕ್ಷಣಗಳನು
ಜೀವಂತಿಕೆಯಿಂದ
ಅನುಭವಿಸುವವನು

### ಕನವರಿಕೆ

ಕೊರೊನಾ ಕಲಿಸಿದ
ಸ್ವಚ್ಛತೆ, ಸರಳತೆ
ಇತ್ಯಾದಿ ಪಾಠಗಳೆಲ್ಲ
ಮುಂದಿನ ದಿನಗಳಲ್ಲಿ
ಬದುಕಿನ ಶೈಲಿಯಾದರೆ
ನನಸಾಗಬಹುದೇನೋ
ಪಿತಾಮಹನ ಕನಸು!

—ಡಾ. ವಿನಯ ಶ್ರೀನಿವಾಸ್



ಸಿಕ್ಕ ಮೇಲೆ ನಮ್ಮ ಮನೆಗೆ ಬಂದು ಚೀಟಿ ತಗೊಂಡು ಹೋಗೋಕೆ ಹೇಳ್ತೀನಿ.

ಶಿವರಾಮು ಗೂಗಲ್ಲಲ್ಲಿ ಸಿಕ್ತಾನಾ? ಮನಸ್ಸಿನಲ್ಲಿ ಪ್ರಶ್ನೆ. ಎಲ್ಲಾ ಬದಲಾಗ್ತಾ ಇದೆ. ಸಮಾಧಾನದ ಉತ್ತರ.

'ಗೂಗಲ್ಲಲ್ಲಿ ಸಿಗೋದಾದ್ರೆ ನಾನೇ ಹುಡುಕ್ತೀನಿ. ನೀನ್ಯಾಕೆ ನಿದ್ದೆಗೆಡ್ತೀಯ' ಎಂದ.

'ಹಾಗಂತ ಊರಲ್ಲಿರೋ ಶಿವರಾಮುನೆಲ್ಲ ಹುಡುಕಬೇಡ... ಸಿಗೋ ಎಲ್ಲಾ ಡಿಟೈಲ್ಸ್‌ನ್ನೂ ಶಾರ್ಟ್ ಲಿಸ್ಟ್ ಮಾಡು, ನಮ್ಮ ಏರಿಯಾದಲ್ಲಿ ಇರೋ ಶಿವರಾಮು ಸಿಕ್ಕರೆ ಅವರಿಗೆ ಕಾಲ್ ಮಾಡು. ನಮ್ಮ ಬೀದಿಯಲ್ಲಿ ಅವರ ಪ್ರಿಸ್ಕ್ರಿಪ್ಷನ್ ಸಿಕ್ಕಿದೆ ಅಂದರೆ ಅವರು ಅಲ್ಲೇ ಸುತ್ತಮುತ್ತ ಇರ್ತಾರೆ' ಎಂದು ಮತ್ತಷ್ಟು ಅಪ್‌ಡೇಟ್ ಕೊಟ್ಟಳು.

'ಸರಿ' ಎಂದು ಹೇಳಿದ. ಗುಡ್ ನೈಟ್ ಎಂದ. ಸಿರಿ ಗುಡ್ ಡೇ ಅಂದಳು. ಕಾಲ್ ಕಟ್ ಮಾಡಿದ. ತಡಮಾಡದೆ ಕಂಪ್ಯೂಟರ್ ಮುಂದೆ ಕೂತ. ಶಿವರಾಮು, ಶಿವರಾಮ್, ಶಿವರಾಮಣ್ಣ ಶಿವರಾಮಯ್ಯ ಶಿವರಾಮಪ್ಪ ಶಿವು, ಶಿವಣ್ಣ, ಕ್ಯಾಪಿಟಲ್ ಲೆಟರ್ ಶಿವರಾಮು, ಸ್ಮಾಲ್ ಲೆಟರ್ ಶಿವರಾಮು ಎಲ್ಲಾ ಸಾಧ್ಯತೆಗಳನ್ನೂ ಸರ್ಚ್ ಮಾಡಿದ. ಶಿವನ ಬಗೆ ಬಗೆ ಭಂಗಿಯ ಫೋಟೋಗಳು ಬಂದವೆ ವಿನಹ ಶಿವರಾಮು ಸಿಗಲಿಲ್ಲ. ಮಗಳು ಹೇಳಿದ ದ್ಯಾಟ್ ಈಸ್ ಹಿಸ್ ರೆಸ್ಪಾನ್ಸಿಬಿಲಿಟಿ ಆರ್ ಇರೆಸ್ಪಾನ್ಸಿಬಿಲಿಟಿ ಎನ್ನುವ ಮಾತು ನೆನಪಿಗೆ ಬಂದು, 'ಹೌದು, ಅಷ್ಟು ತುರ್ತು ಇದ್ದರೆ ಹುಡುಕಿಕೊಳ್ತಾನೆ' ಎಂದುಕೊಂಡ. ಏನೋ ಹೊಳೆದಂತಾಗಿ ಆ ಮಾತ್ರೆಗಳು ಯಾವ ರೋಗಕ್ಕೆ ಇರಬಹುದು ಎಂದು ಸರ್ಚ್ ಮಾಡಿದ. ತೀವ್ರ ಹೃದ್ರೋಗ ಸಮಸ್ಯೆ ಎಂದು ತಿಳಿದು ಮತ್ತೆ ಗೊಂದಲಗೊಂಡ. ಆ ಚೀಟಿ ಬರೆದ ಡಾಕ್ಟರನ ನಂಬರ್ ಸಿಕ್ಕರೆ ಅವನ ಮೂಲಕ ಶಿವರಾಮುನ ಪತ್ತೆ ಮಾಡಬಹುದು ಎನಿಸಿತು. ಮತ್ತೆ ಚೀಟಿ ನೋಡಿದ. ಯಾವುದೋ ಕಾರ್ಡಿಯಾಲಜಿ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್‌ದು. ಏನೂ ಪ್ರಯೋಜನ ಇಲ್ಲವೆಂದುಕೊಂಡು ಸುಮ್ಮನಾದ.

9 ಗಂಟೆಯಾಯಿತು. ಅನು ಬಂದು ತಿಂಡಿ, ಊಟದ ಡಬ್ಬಿ ಕೊಟ್ಟಳು. ಇವನು ಹಿಂದಿನ ದಿನದ ಡಬ್ಬಿ ವಾಪಸ್ಸು ಕೊಟ್ಟ. ಸ್ನಾನ ಮಾಡಿದ. ತಿಂಡಿ ತಿಂದ. ಎಲ್ಲವೂ ಯಾಂತ್ರಿಕ. ಮನಸ್ಸಿನ ತುಂಬೆಲ್ಲಾ ಶಿವರಾಮು ಆವರಿಸಿ ಬಿಟ್ಟಿದ್ದ. ಧ್ಯಾನದಲ್ಲೂ ಕೂಡಾ. ಇವನ್ಯಾರು ಈ ಶಿವರಾಮು, ಯಾವ ಬಾದರಾಯಣ ಸಂಬಂಧ, ತಾನು ಯಾಕೆ ಹೀಗೆ ಅವನಿಗೆ ಮರುಗುತ್ತಿದ್ದೇನೆ ಎನ್ನುವ ಪ್ರಶ್ನೆ

